# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಕೊಡಗು-ಮಡಿಕೇರಿ

## <u>ಎಸ್.ಸಿ ಸಂಖ್ಯೆಃ 23/2023</u>

ಪ್ರಾಸಾಃ 22
ಚಾಸಾಃ23

ಸಾಕ್ಷಿದಾರರ ಹೆಸರು: ಕೆ. ಪಿ ರಾಮಚಂದ್ರ

ತಂದೆಯ ಹೆಸರು : ಕೆ. ಎಂ ಪುಟ್ಟಯ್ಯ

ವಯಸ್ಸು : 52 ವರ್ಷ

ವೃತ್ತಿ : ಹಿರಿಯ ಮೋಟಾರ್ ವಾಹನ ನಿರೀಕ್ಷಕರು, ಆರ್.ಟಿ.ಓ, ಕೋಲಾರ

ವಾಸ : ಕೋಲಾರ

**ಸಾಕ್ಷಿಯನ್ನು ದಿನಾಂಕ 05-08-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು ಜುಲೈ 2019 ರಿಂದ ಜುಲೈ 2024 ರವರೆಗೆ ಮೋಟಾರ್ ವಾಹನ ನಿರೀಕ್ಷಕನಾಗಿ ಮಡಿಕೇರಿಯ ಆರ್.ಟಿ.ಓ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೆ.

2. ದಿಃ 13-10-2022 ರಂದು ಪ್ರಾಸಾ-21 ರವರು ವಾಹನ ಸಂಖ್ಯೆಃ KA-31-M-0210 ನ್ನು ಪರಿಶೀಲಿಸಿ ವರದಿ ನೀಡುವವಂತೆ ನನಗೆ ಮನವಿಯನ್ನು ನೀಡಿದರು. ಆ ಪ್ರಕಾರ ನಾನು ಅದೇ ದಿನಾಂಕ ಸಿದ್ದಾಪುರ ಪೊಲೀಸ್ ಠಾಣೆಯ ಆವರಣಕ್ಕೆ ಹೋಗಿ ಅಲ್ಲಿ ಇದ್ದ ಅಮಾನತ್ತು ಪಡಿಸಿಕೊಂಡ KA-31-M-0210 ನ್ನು ಖುದ್ದಾಗಿ ಪರಿಶೀಲಿಸಿ ನೋಡಲಾಗಿ ಸದರಿ ವಾಹನವು ಮಹೇಂದ್ರ ಕಂಪನಿಯ ಗ್ರೇ ಬಣ್ಣದ ಲಘು ಮೋಟಾರ್ ವಾಹನ (ಜೀಪು) ಆಗಿದ್ದು, ವಾಹನದ ಚಾಸಿಸ್ ಸಂಖ್ಯೆಃ CJ500DI4DP44365 ಆಗಿರುತ್ತದೆ. ಸದರಿ ವಾಹನದ ಮುಂಭಾಗದ ವಿಂಡ್ ಸ್ಕ್ರೀನ್ ಗ್ಲಾಸ್ ಒಡೆದು ಹೋಗಿತ್ತು. ಸದರಿ ಗ್ಲಾಸಿನ ಅಂದಾಜು ಮಾರುಕಟ್ಟೆ ಮೌಲ್ಯ ಲೇಬರ್ ವೆಚ್ಚ ಸೇರಿ ರೂ.4,869/- ಆಗಿರುತ್ತದೆ.

ಈಗ ಬಗ್ಗೆ ನಾನು ನಿಪಿ-32 ರಂತೆ ವರದಿಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸದರಿ ವರದಿಯನ್ನು ನಾನು ಈಗ ನೋಡುತ್ತಿದ್ದು ಸಾಕ್ಷಿ ಗುರುತಿಸಿದ ನಿಪಿ-32 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-32(ಬಿ) ಎಂದು ಗುರುತಿಸಲಾಯಿತು. ಯಾವುದೇ ವಾಹನದ ವಿಂಡ್ ಸ್ಕ್ರೀನ್ ಗ್ಲಾಸ್ ಗೆ ಕತ್ತಿಯಿಂದ ಬಲವಾಗಿ ಒಡೆದಲ್ಲಿ ಅದು ಒಡೆದು ಹೋಗುವ ಅಥವಾ ಜಖಂ ಆಗುವ ಸಾಧ್ಯತೆ ಇರುತ್ತದೆ. ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿರುವ ಮು.ಮಾ-9 ಸದರಿ ವಾಹನದ ವಿಂಡ್ ಸ್ಕ್ರೀನ್ ಗ್ಲಾಸ್ ನ ಒಡೆದ ಚೂರುಗಳು ಆಗಿರುತ್ತದೆ.

**<u>ಪಾಟೀಸವಾಲು- 1 ರಿಂದ 3 ನೇ ಆರೋಪಿತರ ಪರ ಶ್ರೀ ಪಿ.ಕೆ.ಎಂ., ವಕೀಲರಿಂದಃ</u>**

3. ನಾನು ಆಟೋಮೊಬೈಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮ ಮಾಡಿರುತ್ತೇನೆ. ಒಡೆದು ಹೋಗುವುದಕ್ಕೂ ಜಖಂಗೊಳ್ಳುವುದಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ವಿಂಡ್ ಸ್ಕ್ರೀನ್ ಗ್ಲಾಸ್ ಗಳನ್ನು ಎರಡು ಗಾಜುಗಳನ್ನು ಜೋಡಿಸಿ ತಯಾರಿಸಲಾಗಿರುತ್ತದೆ. ಎರಡು ಗಾಜುಗಳ ಮಧ್ಯೆ Polyvinyl Butyral (PVB) ಲೇಯರ್ ಇರುತ್ತದೆ ಎಂದರೆ ಸರಿ. ಯಾವುದೇ ಗಟ್ಟಿ ವಸ್ತು ಗಾಜುವಿಗೆ ತಗುಲಿದರೆ ಅದು ಒಡೆದು ತುಣುಕುಗಳಾಗಿ ಬೀಳಬಾರದು ಎಂಬ ಉದ್ದೇಶದಿಂದ ವಿಂಡ್ ಸ್ಕ್ರೀನ್ ಗ್ಲಾಸ್ ನ ಗಾಜುಗಳ ಮಧ್ಯೆ Polyvinyl Butyral (PVB) ಲೇಯರ್ ಅಳವಡಿಸಲಾಗಿರುತ್ತದೆ ಎಂದರೆ ಸರಿ. ವಿಂಡ್ ಸ್ಕ್ರೀನ್ ಗ್ಲಾಸ್ ನ ಗಾಜುಗಳ ಮಧ್ಯೆ Polyvinyl Butyral (PVB) ಲೇಯರ್ ಅಳವಡಿಸದ ಕಾರಣ ಗಾಜು ಮು.ಮಾ-9 ರ ರೀತಿ ತುಣುಕುಗಳಾಗಿ ಬೀಳುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-9 ನ್ನು ನಾನು ಪ್ರಥಮ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಮು.ಮಾ-9 ರಲ್ಲಿ Polyvinyl Butyral (PVB) ಲೇಯರ್ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಿಪಿ-32 ರಲ್ಲಿ ನಮೂದಿಸಿದ ರೂ.4,869/- ರ ಪೈಕಿ ಗ್ಲಾಸಿನ ಮೌಲ್ಯ ಎಷ್ಟು, ಲೇಬರ್ ವೆಚ್ಚ ಎಷ್ಟು ಎಂದು ನನಗೆ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಲಾಗುವುದಿಲ್ಲ. ನಾನು ಇಂಡಿಯಾ ಗ್ಯಾರೇಜ್ ಮಹೇಂದ್ರ ಶೋರೂಂ, ಮಡಿಕೇರಿಯಲ್ಲಿ ವಿಚಾರಿಸಿದಾಗ ನನಗೆ ವಿಂಡ್ ಸ್ಕ್ರೀನ್ ಗ್ಲಾಸ್ ನ ಮಾರು ಕಟ್ಟೆಯ ಮೌಲ್ಯದ ಬಗ್ಗೆ ಮಾಹಿತಿ ಸಿಗದ ಕಾರಣ ನಾನು ಮಡಿಕೇರಿಯ ಸುದರ್ಶನ್ ಸರ್ಕಲ್ ಬಳಿ ಇರುವ ಆಟೋ ಟ್ರೇಡಿಂಗ್ ವರ್ಕ್ ಶಾಪ್ ಮತ್ತು ಬಿಡಿ ಭಾಗಗಳ ಅಂಗಡಿಯಲ್ಲಿ ವಿಚಾರಿಸಿ ಮಹೇಂದ್ರ ಜೀಪಿನ ವಿಂಡ್ ಸ್ಕ್ರೀನ್ ಗ್ಲಾಸ್ ನ ಮಾರುಕಟ್ಟೆಯ ಮೌಲ್ಯವನ್ನು ನಿಪಿ-32 ರಲ್ಲಿ ನಮೂದಿಸಿರುತ್ತೇನೆ. ಆಟೋ ಟ್ರೇಡಿಂಗ್ ವರ್ಕ್ ಶಾಪ್ ಮತ್ತು ಬಿಡಿ ಭಾಗಗಳ ಅಂಗಡಿಯಲ್ಲಿ ನಾನು ಸದರಿ ವಿಂಡ್ ಸ್ಕ್ರೀನ್ ಗ್ಲಾಸ್ ನ ಮಾರುಕಟ್ಟೆಯ ಮೌಲ್ಯವನ್ನು ತಿಳಿದುಕೊಂಡ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ KA-31-M-0210 ವಾಹನವನ್ನು ಪರಿಶೀಲನೆ ಮಾಡಿರುವುದಿಲ್ಲ, ಸಿದ್ದಾಪುರ ಪೊಲೀಸರ ಕೋರಿಕೆಯ ಮೇರೆಗೆ ನಿಪಿ-32 ರಂತೆ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ವಾಹನದ ವಿಂಡ್ ಸ್ಕ್ರೀನ್ ಗ್ಲಾಸ್ ಗೆ ಕತ್ತಿಯಿಂದ ಒಡೆದ್ದಲ್ಲಿ ಸದರಿ ಗ್ಲಾಸು ಪುಡಿ ಪುಡಿ ಆಗುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ